ಕಥೆ

# ಮೆಂಟಲ್ ಬ್ಲಾಕ್





**ಉಷಾ ನರಸಿಂಹನ್**

ಕಲೆ: ಎಸ್.ವಿ. ಹೂಗಾರ್

ಸಂದೀಪ್ ಹೀಗೆ ಹೇಳುತ್ತಿರುವುದು ಐದನೆಯ ಬಾರಿ. ಇಬ್ಬಾಯಿಯ ಖಡ್ಗವನ್ನು ಒಡಲಿಗೆ ಇರಿದಂತೆ. ಅಲ್ಲೆ ಬಿಡದೆ ಮತ್ತೆ ಹೊರಗೆಳದಂತೆ. ಇರಿವಾಗ ಆಗುವ ನೋವು ಹಿಂಸೆಗಿಂತ ಆಮೇಲಿನ ತಲ್ಲಣವೇ ಜಾಸ್ತಿ. ಇಷ್ಟಕ್ಕೂ ಅವನೇನು ಅನ್ನಬಾರದ್ದು ಅನ್ನಲಿಲ್ಲ ಅಂದಳು ರೀಟಾ. ರೀಟಾಳೇನು... ಯಾರಾದರೂ ಹಾಗೆ ಅನ್ನುತ್ತಾರೆ. 'ಅದೊಂದು ಮಾತಿಗೆ ಯಾಕಿಷ್ಟು ಅಪ್ಸೆಟ್ಟಾಗ್ತೀಯ ನೀನು! ಟೇಕ್ ಇಟ್ ಈಸಿ ಪ್ರಿಯಾ, ಅವನು ಈ ಕಂಪನಿಗೆ ಪಿಲ್ಲರ್. ನಮ್ಮ ಟೀಮಿನ ಲೀಡರ್. ಅವನಿಗೆ ಎಷ್ಟು ಸ್ಟ್ರೆಸ್ ಇರುತ್ತೆ ಗೊತ್ತಾ ನಿಂಗೆ?' ಅಂದ ದರ್ಶನ್. 'ಏನಾಯ್ತು ಪ್ರಿಯಾ?' ಯಾಕಿಷ್ಟು ಸ್ಟ್ರೆಸ್ಡ್ ಆಗಿದೀಯ? ಮಾಮೂಲಿ ವರ್ಕ್ ಪ್ರೆಶರ್ರ?' ಎಂದು ಗೋಪು ಕೇಳಿದಾಗ ಯಾಕೋ ಒತ್ತರಗೊಂಡಿದ್ದ ಹೃದಯ ದ್ರವಿಸಿ ಬಳಬಳನೆ ಕಣ್ಣೀರು ಹರಿಯಿತು. 'ಏಯ್ ವಾಟ್ ಹ್ಯಾಪನ್ಡ್' ಅಂತ ಗೋಪು ಭುಜ ಬಳಸಿದಾಗ, 'ಇಲ್ಲ ಗೋಪು' ನಂಕೈಲಾಗಲ್ಲ; ಬೆಳಿಗ್ಗೆ 8.30ಕ್ಕೆ ಮನೆಬಿಟ್ಟು ಆಫೀಸಿಗ್ಹೋಗಿ ಹತ್ತಕ್ಕೆ ಲಾಗಿನ್ ಆದ್ರೆ ಸಂಜೆ ಏಳಕ್ಕೆ ಲಾಗೌಟ್ ಆಗ್ತೀನಿ. ಮನೆ ತಲುಪಕ್ಕೆ ಒಂದೂವರೆ ಗಂಟೆಯಾಗುತ್ತೆ. ಟೋಟಲಿ ಥರ್ಟೀನ್ ಟು ಪೋರ್ಟೀನ್ ಅವರ್ಸ್ ಹೊರಗಿರ್ತೀನಿ. ಎಲ್ಲ ಕೆಲಸ ಮಾಡ್ತೀನಿ. ಆದ್ರೂ ಸಂದೀಪ್ ಏನಾದ್ರೂ ಹೇಳ್ತಾನೆ ಇರ್ತಾನೆ' ಎಂದಳು ಕಣ್ಣೊರೆಸಿಕೊಳ್ಳುತ್ತಾ.

'ಅಂಥದ್ದೇನಂದ ನಿನ್ನ ಟೀಮ್‌ಲೀಡರ್?' ಅಂದ ಗೋಪುಗೆ, 'ಡೋಂಟ್ ಬ್ರಿಂಗ್ ಯುವರ್ ಹೋಮ್ ಹಿಯರ್ ಅಂದ. ಇವತ್ತೊಂದಿನ ಅಲ್ಲ... ಹಿಂದೆ ಮೂರ್ನಾಲ್ಕು ಸಾರಿ ಹೇಳಿದ್ದಾನೆ. ಮನೆ, ಮಗು ಎಲ್ಲ ಬಿಟ್ಟು ಕೆಲಸ ಮಾಡ್ತೀನಿ. ಇಂಥದ್ದು ಅನ್ನಿಸ್ಕೊಳ್ಳಕ್ಕೆ' ಅಂದಳು. ದುಃಖದಿಂದ. 'ಅಯ್ಯೋ ರಬ್ಬಿಶ್ ಅಷ್ಟೇನ?